## ನನ್ನ ಕಥಾಪ್ರಸಂಗ

**ಕ**ಳೆದ ನಾಲ್ಕು ದಶಕಗಳಿಂದಲೂ ಕತೆ ಕಾದಂಬರಿಗಳ ಮೂಲಕ ಸುಳ್ಳು ಹೇಳುತ್ತಾ ಬಂದವನು ನಾನು. ಸಾಹಿತ್ಯವು ಬದುಕಿನ ಬದುಕಿನ 'ಪ್ರತಿಬಿಂಬ' ಎಂಬ ಬಹುಜನಪ್ರಿಯ ಹೇಳಿಕೆಗೆ ನನ್ನ ಸಮ್ಮತಿ ಅಂದೂ ಇರಲಿಲ್ಲ. ಇಂದೂ ಇಲ್ಲ. ಸಾಹಿತ್ಯವು ಬದುಕಿನ 'ಗತಿಬಿಂಬ' ಆಗಬೇಕೆಂಬುದು ನನ್ನ ಹಟ.

ವಾಸ್ತವ 'ಇದು' ಎನ್ನುವುದನ್ನು ವರದಿ ಮಾಡುವುದನ್ನು ಉದ್ದೇಶಪೂರ್ವಕವಾಗಿ ಮರೆಮಾಚಿ, 'ನಿಜವಾಗಿ ಇರುವುದು ಹೀಗೆ' ಎಂದು ಸುಳ್ಳು ಸುಳ್ಳೇ ಬರೆಯುತ್ತಾ ಬಂದಿರುವೆ. ಆದ್ದರಿಂದಲೇ ನನ್ನ ಕತೆ ಕಾದಂಬರಿಗಳಲ್ಲಿ ಯಾವ ಪಾತ್ರವೂ ಪೂರ್ತಿ ಕೆಟ್ಟವನಾ/ಳಾಗಿರುವುದಿಲ್ಲ. ಯಾವುದೇ ಪಾತ್ರವೂ ಬದುಕಿನಲ್ಲಿ ಸೋತು ನಿರಾಸೆಯಿಂದ ಆತ್ಮಹತ್ಯೆ ಮಾಡಿಕೊಳ್ಳುವುದಿಲ್ಲ. ಹೆಣ್ಣುಗಳಂತೂ ಯಾವುದೇ ಕಾರಣಕ್ಕೆ ಸೋತದ್ದೇ ಇಲ್ಲ ಇತ್ಯಾದಿ, ಇತ್ಯಾದಿ. 'ಮೀನು ಮಾರುವವನು ಹಡಗು ಕೊಳ್ಳುತ್ತಾನೆ. ಹಡಗು ಮುಳುಗಿದರೆ ಮೀನು ಮಾರುತ್ತಾನೆ' ಎಂಬುದು ನನ್ನೆಲ್ಲಾ ಬರಹಗಳ 'ಟ್ಯಾಗ್ ಲೈನ್'. ನನ್ನ ಕಥಾಪಾತ್ರಗಳು ಪೂರ್ತಿ ಆರಂಭದಲ್ಲಿ ಒಳ್ಳೆಯವರಾಗಿರದಿದ್ದರೂ ಕೊನೆಯಲ್ಲಿ ಕಡಿಮೆ ಕೆಟ್ಟವರಾಗಿಬಿಡುತ್ತಾರೆ. ಹಾಗೆಂದು ತಲ್ಲಣಗಳಿಗೆಂದೂ ನಾನು ಕಣ್ಣು ಮುಚ್ಚಿಕೊಂಡವನಲ್ಲ. ಅವುಗಳಿಗೆ ಅನಗತ್ಯ ಪ್ರಚಾರ ಕೊಡುವುದೂ ಇಲ್ಲ. ನನ್ನ ಕತೆಗಳ ಪ್ರತಿಯೊಂದು ಸಾಲನ್ನೂ ಮೂರು ಮೂರು ಸಲ ತಿದ್ದಿ ತೀಡಿ ಆರಿಸಿದ ಪದಗಳನ್ನು ಬಳಸಿ ಬರೆಯುತ್ತಾ ಬಂದಿರುವೆ. ಅದೊಂದು ಬಗೆಯಲ್ಲಿ ಬಡಗಿಯೊಬ್ಬ ಕುರ್ಚಿಯನ್ನು ಕೆತ್ತಿದಂತೆ. 'ಸ್ಫೂರ್ತಿ' ಇತ್ಯಾದಿ ಮಿಕ್ಕವರಿಗೆ ಆವಾಹನೆಯಾಗುವಂಥದ್ದು; ನನಗಿದುವರೆಗೂ ಆದದ್ದಿಲ್ಲ. ನನ್ನ ಕತೆ, ಕಾದಂಬರಿಗಳೆಲ್ಲವೂ 2+2=4 ಎಂಬ ಲೆಕ್ಕಾಚಾರದ ಫಲಗಳೇ. ಹೇಳಿ ಕೇಳಿ ನಾನೊಬ್ಬ ಬ್ಯಾಂಕು ಉದ್ಯೋಗಿ ತಾನೇ?

ಬ್ಯಾಂಕಿನ ಉದ್ಯೋಗಿಯಾಗಿ, ಬಲು ದೂರದ ಕಲಬುರ್ಗಿ ಸೇರುವವರೆಗೆ, 'ತೀರ್ಥರೂಪರಾದ...' ಎಂಬ ಸಾಂಪ್ರದಾಯಿಕ ಸಾಲಿನಿಂದಾರಂಭಿಸುವ ಪತ್ರವನ್ನೂ ಮನೆಗೂ ಬರೆದವನಲ್ಲ. ಆದರೆ, ಓದುವ ಚಟ ಹೈಸ್ಕೂಲಲ್ಲಿರುವಾಗಲೇ ಅಂಟಿಕೊಂಡಿತ್ತು. ಅದಕ್ಕೆ ಕಾರಣ ನನ್ನಕ್ಕ. ವಾರದಲ್ಲಿ ಎರಡು ಅಥವಾ ಮೂರು ಸಲ, ಶಾಲೆ ಬಿಟ್ಟ ಕೂಡಲೇ ನೇರವಾಗಿ ಪುತ್ತೂರಿನ ಸಾರ್ವಜನಿಕ ಗ್ರಂಥಾಲಯಕ್ಕೆ ಹೋಗಿ ಎರಡು ಕಾದಂಬರಿಗಳನ್ನು ಎತ್ತಿಕೊಳ್ಳದೇ ಮನೆಯೊಳಗೆ ಬರಬಾರದು ಎಂಬ ಆದೇಶವನ್ನು ಅವಳು ಕೊಟ್ಟಿದ್ದಳು. ಬೀಡಿ ಕಟ್ಟುವ 'ಸೂಪಿ'ನ (ಮೊರದ ತರಹ ಇರುತ್ತದೆ ಅದು) ಎಡಮೂಲೆಯಲ್ಲಿ ಯಾವುದಾದರೊಂದು ಕಾದಂಬರಿಯಿಲ್ಲದಿದ್ದರೆ ನನ್ನಕ್ಕನಿಗೆ ಬೀಡಿ ಸುತ್ತಲು ಸಾಧ್ಯವಾಗುತ್ತಿರಲಿಲ್ಲ. ಆಕೆಗೆ ತಂದುಕೊಡುತ್ತಿದ್ದ ಕಾದಂಬರಿಗಳನ್ನು ಕ್ರಮೇಣ ನಾನೂ ಕುತೂಹಲದಿಂದ ಓದಲಾರಂಭಿಸಿದ್ದೆ. ನಂತರ ಅದೇ ಚಟವಾಗಿ ಬೆಳೆದಿತ್ತು. ಎನ್. ನರಸಿಂಹಯ್ಯ, ಮಾ.ಭಿ. ಶೇಷಗಿರಿ ರಾವ್, ತ್ರಿವೇಣಿ, ಎಂ.ಕೆ. ಇಂದಿರಾ, ತ.ರಾ.ಸು., ಅ.ನ.ಕೃ., ಬೀಚಿಯವರ ಕೃತಿಗಳನ್ನೆಲ್ಲ ಆ ದಿನಗಳಲ್ಲೇ ಓದಿ ಮುಗಿಸಿದ ನೆನಪು. ತಮಾಷೆಯೆಂದರೆ, ಮಾಸ್ತಿ, ಕಾರಂತ, ಕು.ವೆಂ.ಪು., ರಾವಬಹಾದ್ದೂರ, ಚದುರಂಗ, ಅನಂತಮೂರ್ತಿ, ತೇಜಸ್ವಿ, ಲಂಕೇಶ್, ಚಿತ್ತಾಲ ಮೊದಲಾದವರನ್ನು ಓದಿದ್ದು ನಾನೂ ಒಬ್ಬ ಕತೆಗಾರನೆಂದು ಸುದ್ದಿಯಾದ ಆನಂತರದ ದಿನಗಳಲ್ಲಿ.

ನಾನೋ, ಆಕಸ್ಮಿಕವಾಗಿ ಕತೆಗಾರನಾದವನು. ಅದಕ್ಕೆ ಕಾರಣ, ಕಲಬುರ್ಗಿಯ ಬ್ಯಾಂಕಿನಲ್ಲಿ ನನ್ನ ಸಹೋದ್ಯೋಗಿಯಾಗಿದ್ದ ಆರೂರು ಲಕ್ಷ್ಮಣ ಶೇಟ್ ಎಂಬ ಕತೆಗಾರರು. ಅವರಿಂದ ನನಗಾದ ಒಂದು ಅವಮಾನದ ಪ್ರಕರಣದಿಂದಾಗಿ ನಾನು ರೊಚ್ಚಿಗೆದ್ದಿದ್ದೆ. ಆಗ ಅವರ ವಿರುದ್ಧ ನನ್ನೊಳಗೆ ಹುಟ್ಟಿಕೊಂಡ ಅಸೂಯೆಯೇ ನನ್ನನ್ನು ಕತೆಗಾರನನ್ನಾಗಿ ರೂಪಿಸಿತ್ತು. (ಈ 'ಅಸೂಯೆ